ಆ) ಆ ಪೈಕಿ ಚಿಕ್ಕೋಡಿಗೆ ಮಂಜೂರಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು).—

ಆ) ಬೆಳಗಾಂ ಜಿಲ್ಲೆಯಲ್ಲಿ ೧೯೮೭–೮೮ನೇ ಸಾಲಿನಲ್ಲಿ ನೂರು ಭಾವಿ ಯೋಜನೆ ಅಡಿಯಲ್ಲಿ ಮಂಜೂರಾಗಿ ಕೆಲಸ ಪ್ರಾರಂಭವಾಗಿರುವ ವಿವರ ಕೆಳಗಿನಂತಿದೆ (ತಾಲ್ಲೂಕುವಾರು)

	ತಾಲ್ಲೂಕು ಹೆಸರು	ಮಂಜೂರಾಗಿ ಕೆಲಸ ಪ್ರಾರಂಭವಾಗಿರುವ ಸಂಖ್ಯೆಗಳು.
೧	ಅಥಣಿ	೯೦
೨	ಬೈಲಹೊಂಗಲ	೯೧
೩	ಬೆಳಗಾಂ	೧೦೬
೪	ಚಿಕ್ಕೋಡಿ	೧೦೧
೫	ಗೋಕಾಕ್	೧೦೫
೬	ಹುಕ್ಕೇರಿ	೭೮
೭	ಖಾನಾಪುರ	೯೭
೮	ರಾಯಬಾಗ	೯೪
೯	ರಾಮದುರ್ಗ	೫೫
೧೦	ಸವದತ್ತಿ	೭೦
	ಒಟ್ಟು	೮೮೭

ಆ) ೧೦೧ ಫಲಾನುಭವಿಗಳಿಗೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಮಂಜೂರಾತಿ ದೊರೆತಿದೆ.

ಚಲನ ಚಿತ್ರ ನಿಗಮಂ ಅಭಿವೃದ್ಧಿ ಮಂಡಳಿಯಂ ಬಗ್ಗೆ

೨೭೧೧ ಶ್ರೀ ಮಾಲಿಕಯ್ಯ ಗುತ್ತೇದಾರ್ (ಅಫಜಲ್‌ಪುರ)—ಮಾನ್ಯ ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ತಯಾರಾದ ಮತ್ತು ಬಿಡುಗಡೆಯಾದ ಒಟ್ಟು ಕನ್ನಡ ಚಲನಚಿತ್ರಗಳೆಷ್ಟು. ಆ ಪೈಕಿ ಸರ್ಕಾರದಿಂದ ಆರ್ಥ ಹಾಗೂ ಪೂರ್ಣ ತೆರಿಗೆ ಅಥವಾ ಸಹಾಯಧನ ನೀಡಲಾಗಿರುವ ಚಿತ್ರಗಳೆಷ್ಟು?

ಆ) ಅನ್ಯ ಭಾಷಾ ಚಿತ್ರಗಳಿಗೂ ತೆರಿಗೆ ವಿನಾಯಿತಿ ಅಥವಾ ಸಹಾಯಧನ ನೀಡಂತ್ತಿರುವುದು ನಿಜವೇ? ಹಾಗಿದ್ದಲ್ಲಿ ಸಹಾಯಧನ ಅಥವಾ ತೆರಿಗೆ ವಿನಾಯಿತಿ ನೀಡಲಾಗಿರುವ ಚಿತ್ರಗಳೆಷ್ಟು?

ಇ) ಅನ್ಯಭಾಷಾ ಚಿತ್ರಗಳಿಗೂ ತೆರಿಗೆ ವಿನಾಯಿತಿ ಅಥವಾ ಸಹಾಯಧನ ನೀಡಿದಲ್ಲಿ ಕನ್ನಡ ಚಿತ್ರರಂಗವನ್ನು ಸರ್ಕಾರವೇ ನಿರ್ಲಕ್ಷಿಸಿದಂತಾಗುವುದಿಲ್ಲವೇ?

ಈ) ಹಾಗಿದ್ದಲ್ಲಿ ಕನ್ನಡ ಚಿತ್ರರಂಗವನ್ನು ಅಭಿವೃದ್ಧಿ ಗೊಳಿಸಲು ಸರ್ಕಾರದವರು ರೂಪಿಸಿಕೊಂಡಿರುವ ಯೋಜನೆ ಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು),—

ಅ) ೧) ೧೯೮೭–೮೮ನೇ ಸಾಲಿನಲ್ಲಿ ತಯಾರಾದ ಚಿತ್ರಗಳು ೬೧
೨) ೧೯೮೭–೮೮ನೇ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳು ೬೦
೩) ಅರ್ಧ ತೆರಿಗೆ ವಿನಾಯಿತಿ ಪಡೆದ ಚಿತ್ರಗಳು ೪೦
೪) ಪೂರ್ತಿ ತೆರಿಗೆ ವಿನಾಯಿತಿ ಪಡೆದ ಚಿತ್ರ ೧
೫) ೧೯೮೬–೮೭ರಲ್ಲಿ ೨೩ ಚಲನ ಚಿತ್ರಗಳಿಗೆ ಸಹಾಯಧನ ನೀಡಲಾಗಿದೆ

ಆ) ಅನ್ಯ ಭಾಷಾ ಚಿತ್ರಗಳಿಗೆ ಸಹಾಯಧನ ನೀಡುತ್ತಿಲ್ಲ? ಆದರೆ ರಾಷ್ಟ್ರ ಅಥವಾ ಯಾವುದೇ ರಾಜ್ಯ ಪ್ರಶಸ್ತಿಗಳಿಸಿದಂತಹ ದೇಶದ ಯಾವುದೇ ಭಾಷಾ ಚಿತ್ರಗಳಿಗೆ ಅವುಗಳ ಪ್ರಥಮ ಪ್ರದರ್ಶನ ದಿನಾಂಕದಿಂದ ೬ ತಿಂಗಳ ಕಾಲ ಸಂಪೂರ್ಣ ಮನರಂಜನಾ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ.

೧೯೮೭ರಲ್ಲಿ ೩ ಚಿತ್ರಗಳಿಗೆ ಪೂರ್ಣ ಮನರಂಜನಾ ತೆರಿಗೆ ವಿನಾಯಿತಿ ನೀಡಲಾಯಿತು.

ಇ) ಕರ್ನಾಟಕ ಜನತೆಗೆ ಅನ್ಯಭಾಷಾ ಪ್ರಶಸ್ತಿ ವಿಜೇತ ಚಿತ್ರಗಳನ್ನು ವೀಕ್ಷಿಸಲು ಸಹಾಯ ಮಾಡಿದಂತಾಗುತ್ತದೆಯೇ ವಿನಃ ಇದರಿಂದ ಕನ್ನಡ ಚಿತ್ರರಂಗವನ್ನು ನಿಸ್ತೇಜಗೊಳಿಸಿದಂತಾಗುವುದಿಲ್ಲ.

ಈ) ಕನ್ನಡ ಚಿತ್ರರಂಗವನ್ನು ಅಭಿವೃದ್ಧಿಗೊಳಿಸಲು ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ರೂಪಿಸಿಕೊಂಡಿದೆ.

೧) ಕನ್ನಡ ಚಿತ್ರನಿರ್ಮಾಪಕರು ಚಿತ್ರದ ಚಿತ್ರೀಕರಣವನ್ನು ಸರ್ಕಾರಿ ಸ್ವಾಮ್ಯದ ಪ್ರದೇಶಗಳಲ್ಲಿ ರಾಜ್ಯದಲ್ಲಿ ಎಲ್ಲಿಯೇ ಮಾಡಿದರೂ ದಿನ ಒಂದಕ್ಕೆ ೧೦೦–೦೦ ರೂ. ಚಿತ್ರೀಕರಣ ಶುಲ್ಕ ರಿಯಾಯಿತಿ (ಅನ್ಯಭಾಷಾ ಚಿತ್ರಗಳಿಗೆ ೪೦೦–೦೦ ರೂ. ಗಳಿಂದ ೧,೦೦೦–೦೦ ರೂ. ಗಳವರೆಗೆ ಚಿತ್ರೀಕರಣ ಶುಲ್ಕ ಪಡೆಯಲಾಗುತ್ತಿದೆ).

೨) ರಾಜ್ಯದಲ್ಲಿಯೇ ಸಂಪೂರ್ಣವಾಗಿ ತಯಾರಾದ ಕನ್ನಡ ಚಿತ್ರಗಳಿಗೆ ಶೇಕಡಾ ೫೦ರ ಮನರಂಜನಾ ತೆರಿಗೆ ವಿನಾಯಿತಿ.

೩) ರಾಜ್ಯ ಅಥವಾ ರಾಷ್ಟ್ರ ಪ್ರಶಸ್ತಿ ಪಡೆದ ಮೊದಲನೆ ಅತ್ಯುತ್ತಮ ಚಲನಚಿತ್ರಕ್ಕೆ ಪೂರ್ಣತೆರಿಗೆ ವಿನಾಯಿತಿ.

೪) ಸಹಾಯಧನ ನೀಡಿಕೆ.

೫) ನಟ ನಟಿಯರು, ತಾಂತ್ರಿಕ ವರ್ಗ ಹಾಗೂ ಉತ್ತಮ ಚಲನಚಿತ್ರಗಳಿಗೆ ರಾಜ್ಯ ಪ್ರಶಸ್ತಿಗಳನ್ನು ನೀಡುವ ಯೋಜನೆ.

೬) ರಾಜ್ಯದಲ್ಲಿ ಚಲನಚಿತ್ರ ಭಂಡಾರ ಸ್ಥಾಪನೆ.

೭) ಇತರೆ ಭಾಷೆ ಚಲನಚಿತ್ರಗಳಿಂದ ಕಡಿಮೆ ದರದಲ್ಲಿ ಪ್ರದರ್ಶನ ತೆರಿಗೆ ರಿಯಾಯಿತಿ ನೀಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿ ಸಿನಿಮಾ ಮಂದಿರಗಳನ್ನು ಕೆಡವಿ ಹಾಕುವುದರ ಬಗ್ಗೆ

೧೮೮೨. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ, (ಕುಂದಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸಿನಿಮಾ ಮಂದಿರಗಳನ್ನು ಕೆಡವಿ ಹಾಕಲು ಕೊಟ್ಟಿರುವ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು (ಚಿತ್ರ ಮಂದಿರಗಳ ಹೆಸರುಗಳು ಮತ್ತು ಅವುಗಳನ್ನು ಕೆಡವಲು ಪರವಾನಗಿ ನೀಡಲು ಕಾರಣಗಳು)

ಆ) ಕೆಡವಲಾದ ನಂತರ ಮಾಡಿದ ಪರ್ಯಾಯ ನಿರ್ಮಾಣಗಳು ಟೌನ್‌ಪ್ಲಾನಿಂಗ್ ನಿಯಮಕ್ಕೆ ಅನುಗುಣವಾಗಿದೆಯೇ?